# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಲಯ.

"ವಾರ್ಡ್ ಕಮಿಟಿ - ವಾರ್ಡ್ ನಂ.15ರ ಕಛೇರಿ ಕಾರ್ಯಾಲಯ"

---

ಸಂಖ್ಯೆ:ಬೃಬೆಂಮಪಾ/ದಾವ/ವಾರ್ಡ್ ನಂ.15/DETER/02/2021-22. ದಿನಾಂಕ: 11-05-2021.

ವಿಷಯ: ವಾರ್ಡ್ ನಂ.15. "ದಾಸರಹಳ್ಳಿ" ವಾರ್ಡ್ ಸಭೆಯ ನಡವಳಿ.

ಉಲ್ಲೇಖ: 1. ಸಭಾ ಸೂಚನಾ ಪತ್ರ ಬಿಬಿಎಂಪಿ/ದಾವ/2021-22, ದಿನಾಂಕ:10-05-2021.

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಂ.RD 158 TNR 2020, ದಿನಾಂಕ:07-05-2021.

<<>>

ಉಲ್ಲೇಖ(1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ(2)ರ ಆದೇಶದ ಅಂಶಗಳನ್ನು ಪರಿಶೀಲಿಸಲು **ದಿನಾಂಕ:11-05-2021ರಂದು ದಾಸರಹಳ್ಳಿ, ವಾರ್ಡ್ ನಂ.15ರ ಕಾರ್ಯಾಲಯದಲ್ಲಿ ವಾರ್ಡ್ ಸಮಿತಿ ಸಭೆಯನ್ನು ಬೆಳಗ್ಗೆ 11.00 ಗಂಟೆಗೆ ಕರೆಯಲಾಗಿದ್ದು,** ಸದರಿ ಸಭೆಯ ನಡವಳಿಗಳು.

**<u>ಹಾಜರಿದ್ದವರು</u>**

1. ಶ್ರೀ ಕೆ.ಮಾಯಣ್ಣಗೌಡ, ಕೆ.ಎಂ.ಎ.ಎಸ್. ಉಪ ಆಯುಕ್ತರು, ದಾಸರಹಳ್ಳಿ ವಲಯ ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.15ರ ವಾರ್ಡ್ ಕಮಿಟಿ.
2. ಶ್ರೀ ಧನಂಜಯ್ಯ, ಸಹಾಯಕ ಕಂದಾಯ ಅಧಿಕಾರಿ, ದಾಸರಹಳ್ಳಿ ಉಪ ವಿಭಾಗ.
3. ಶ್ರೀಮತಿ ಅರ್ಚನಾ, ಸಹಾಯಕ ಅಭಿಯಂತರರು, ವಾರ್ಡ್ ನಂ.15 ಹಾಗೂ ಸದಸ್ಯರು ಕಾರ್ಯದರ್ಶಿ.
4. ಶ್ರೀ ಶ್ರೀನಿವಾಸ್, ಕಂದಾಯ ವಸೂಲಿಗಾರರು(ವಾರ್ಡ್ ನಂ.15)
5. ಶ್ರೀ ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.15)
6. ಶ್ರೀಮತಿ ಚೈತ್ರ, ಹಿರಿಯ ಆರೋಗ್ಯ ಪರಿವೀಕ್ಷಕರು(ವಾರ್ಡ್ ನಂ.15)
7. ಶ್ರೀ ಈಶ್ವರ್, ಸಿ.ಆರ್.ಪಿ,.
8. ಶ್ರೀ ಅಶೋಕ್, ಸೆಕ್ಟರ್ ಆಫೀಸರ್ಸ್.
9. ಶ್ರೀಮತಿ ಶಾಮಲ ಮತ್ತು ಪವಿತ್ರ, ಲಿಂಕ್‌ವರ್ಕರ್ಸ್(ವಾರ್ಡ್ ನಂ.15)
10. ಶ್ರೀ ಬೀಲಾಲ್ ಅಹಮ್ಮದ್, ನೋಡಲ್ ಅಧಿಕಾರಿ,(ಹೋ-ಐಸೋಲೇಷನ್)
11. ಶ್ರೀಮತಿ ಶಶಿಕಲಾ, ಹೋಂ-ಐಸೋಲೇಷನ್(ಟೀಮ್)
12. ಶ್ರೀ ಸತೀಶ್, ಮಾರ್ಷಲ್(ವಾಡ್ ನಂ.15)

ಶ್ರೀಮತಿ ಅರ್ಚನಾ, ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

-ಪು.ತಿ.ನೋ-

o/c

Scanned with CamScanner

ಶ್ರೀ ಕೆ.ಮಾಯಣ್ಣಗೌಡ, ಉಪ ಆಯುಕ್ತರು, ದಾಸರಹಳ್ಳಿ ವಲಯ ಹಾಗೂ ನೋಡಲ್ ಅಧಿಕಾರಿ, ವಾರ್ಡ್ ನಂ.15ರ ಕಮಿಟಿ ರವರು ಮಾತನಾಡುತ್ತಾ, ಉಲ್ಲೇಖ(2)ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.15ರಲ್ಲಿ "Ward Decentralized Triage and Emergency Response (DETER)" Committee for Covid-19 Management (WDC)ಯ ಸಮಿತಿ ರಚನೆ " ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ"ದ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಿಡಲು ಹಾಜರಿದ್ದ ಎಲ್ಲಾ ಬಿಬಿಎಂಪಿ ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.

2. ಕೋವಿಡ್-19 ನಿಯಂತ್ರಣ ಸಂಬಂಧ "(DETER)" ಸಮಿತಿ ರಚನೆ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ.

    1. "Physical Triaging" ಹಾಗೂ ವಾರ್ಡ್ ವಾರ್‌ರೂಂ ಸ್ಥಾಪನೆಗಾಗಿ ಸೂಕ್ತ ಕಟ್ಟಡ ಸ್ಥಳಾವಕಾಶ ಗುರುತಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, **ಟಿ.ದಾಸರಹಳ್ಳಿ, ಮಹಾಕಾಳೆಸ್ವಿನಗರ, ಸರ್ಕಾರಿ ಪ್ರೌಢಶಾಲೆ ಹಿಂಭಾಗ ದಾಸರಹಳ್ಳಿ, ಬೆಂಗಳೂರು-560057.ರಲ್ಲಿ ಇರುವ ಡಾ||ಬಿ.ಆರ್.ಅಂಬೇಡ್ಕರ್, ಸಮುದಾಯ ಭವನದಲ್ಲಿ** ಅಗತ್ಯ ಕೇಂದ್ರ ಸ್ಥಾಪಿಸಲು ಕ್ರಮ ವಿಡಲು ನಿರ್ಧರಿಸಲಾಯಿತು.

    2. ಅಗತ್ಯವಿರುವ ಬ್ಯಾನರ್, ಪೋಸ್ಟರ್, ನಾಮಫಲಕ, ಸೂಚನಾಫಲಕ ಹಾಗೂ ಅಗತ್ಯ ಪ್ರಮುಖ ಸಾಮಾಗ್ರಿಗಳನ್ನು ಏರ್ಪಾಡು ಮಾಡಿಕೊಳ್ಳಲು ಕ್ರಮವಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

    3. ವಾರ್ಡ್‌ನ ವಾರ್‌ರೂಂಗೆ ಪ್ರತ್ಯೇಕ ಅಗತ್ಯವಿರುವ ಟೆಲಿಫೋನ್, ಕಾಲ್‌ಸೆಂಟರ್ ಸೌಲಭ್ಯ ಒದಗಿಸಲು ಈಗಾಗಲೇ ವಲಯ ಕಛೇರಿಗೆ ಕೋರಲಾಗಿದ್ದು, ದೂರವಾಣಿ ಸಂಖ್ಯೆ ದೊರೆತ ಕೂಡಲೇ ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

-ಮು.ತಿ.ನೋ-

Scanned with CamScanner

4. ವಾರ್ಡ್‌ವಾರು ಸ್ವಯಂ ಸೇವಕವರನ್ನು ನಿಯಮಾನುಸಾರ ನೊಂದಾಯಿಸಿಕೊಳ್ಳುವುದು, ವಾರ್ಡಿನಲ್ಲಿ, ವೈದ್ಯರು, ಪ್ಯಾರಾಮೆಡಿಕಲ್ ಸಿಬ್ಬಂದಿಯವರನ್ನು ಗುರುತಿಸಿ, ಅಗತ್ಯ ವಿವರ ಸಂಗ್ರಹಣೆ ಹಾಗೂ RWAಗಳನ್ನು ಸೇರಿಸಿಕೊಂಡು ಸರ್ಕಾರಿ ಆದೇಶದ ಪ್ರಕಾರ ಕಾರ್ಯವಾರು ಗುಂಪು ರಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

5. ವಾರ್ಡ್‌ಮಟ್ಟದ ಇಲಾಖಾ ಅಧಿಕಾರಿಗಳ ಕೋರ್‌ಗ್ರೂಪ್, NGO ಹಾಗೂ ಸ್ವಯಂ ಸೇವಕರ ಗ್ರೂಪ್ ಮತ್ತು ಆಸ್ಪತ್ರೆ/ ಹೋಂ ಐಸೋಲೇಷನ್ ಗಮನಿಸುವಿಕೆ, ವೈದ್ಯಕೀಯ/ BLO ಸಿಬ್ಬಂದಿಗಳ ವಾಟ್ಸ್‌ಆಪ್ ಗ್ರೂಪ್‌ಗಳನ್ನು ರಚಿಸಿ ಸಕ್ರಿಯಗೊಳಿಸಿಕೊಳ್ಳಲು ತೀರ್ಮಾನಿಸಲಾಯಿತು.

6. ಬಿಬಿಎಂಪಿ ಕೇಂದ್ರ ಕಛೇರಿಯಿಂದ ನೀಡಲ್ಪಡುವ ಸೂಚನೆಗಳು ಹಾಗೂ ಮಾರ್ಗ ಸೂಚಿಗಳು, ಸರ್ಕಾರಿ ಆದೇಶಗಳು, ವಲಯ ಕಛೇರಿಯ ಆದೇಶ ಅನುಸಾರ, ಆದ್ಯತೆ ಮೇಲೆ ಕ್ರಮವಿಡಲು ತೀರ್ಮಾನಿಸಲಾಯಿತು.

7. ಭೌತಿಕ ಸಭೆ ಅಥವಾ ಭೌತಿಕ ಸಂವಹನ ಸಾಧ್ಯವಾಗದಿದ್ದಲ್ಲಿ ವಾಟ್ಸ್‌ಆಪ್‌ಗ್ರೂಪ್ ಸಂವಹನ, ಇ-ಮೇಲ್, ದೂರವಾಣಿ ಕಾಲ್ ಕಾನ್ಫರೆನ್ಸ್‌ಗಳ ಮೂಲಕ ಸೂಕ್ತವಾಗಿ ಪರಿಣಾಮಕಾರಿಯಾಗಿ ಕ್ರಮವಿಡಲು ನಿರ್ಧರಿಸಲಾಯಿತು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅರ್ಚನಾ)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.15, ದಾಸರಹಳ್ಳಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಕೆ.ಮಾಯಣ್ಣ ಗೌಡ ಕೆ.ಎಂ.ಎ.ಎಸ್)
ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ಉಪ ಆಯುಕ್ತರು, ದಾಸರಹಳ್ಳಿ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು :</u>

1. ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
2. ಮಾನ್ಯ ವಲಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು( ದಾ.ಉ.ವಿ), ಬಿಬಿಎಂಪಿ, ರವರ ಮಾಹಿತಿಗಾಗಿ ಕಳುಹಿಸಿದೆ.
5. ಸಹಾಯಕ ಕಂದಾಯ ಅಧಿಕಾರಿ, ದಾಸರಹಳ್ಳಿ ಉಪ ವಿಭಾಗರವರ ಮಾಹಿತಿಗಾಗಿ ಕಳುಹಿಸಿದೆ.
6. ಕಛೇರಿ ಕಡತಕ್ಕೆ.

Scanned with CamScanner